ಧಾರವಾಡ ಜಿಲ್ಲೆಯಲ್ಲಿ ಶಾಲೆಗಳ ದುರಸ್ತಿ.

1783 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1996-97ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಶಾಲಾ ದುರಸ್ತಿ (ಸಾರ್ವಜನಿಕ ಶಿಕ್ಷಣ ಇಲಾಖೆ ರಾಜ್ಯ ವಲಯ2202 ಲೆಕ್ಕ ಶೀರ್ಷಿಕೆ) ಯೋಜನೆ ಅಡಿಯಲ್ಲಿ ತಾಲ್ಲೂಕುವಾರು ನಿಗಧಿ ಮಾಡಿದ ಭೌತಿಕ ಮತ್ತು ಆರ್ಥಿಕ ಗುರಿ ಎಷ್ಟು?*

ಆ) *ಬಿಡುಗಡೆಯಾದ ಹಣ ಎಷ್ಟು ಖರ್ಚಾದ ಹಣ ಎಷ್ಟು ತಾಲ್ಲೂಕುವಾರು ವಿವರ ನೀಡುವುದು?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 1996-97ನೇ ಸಾಲಿನಲ್ಲಿ ರಾಜ್ಯವಲಯ ವಿವಿಧ ಯೋಜನಾ.ಕಾರ್ಯಕ್ರಮದಡಿಯಲ್ಲಿ ಪ್ರಾಥಮಿಕ ಶಾಲಾ ಕೊಠಡಿಗಳ ದುರಸ್ತಿಗಾಗಿ ಪ್ರತಿ ಕೊಠಡಿಗೆ ರೂ.5000ರಂತೆ ಧಾರವಾಡ ಜಿಲ್ಲೆಗೆ ರೂ.20.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಇದರಲ್ಲಿ ಉಪನಿರ್ದೇಶಕರು ತಾಲ್ಲೂಕುಗಳಿಗೆ ತಾಲ್ಲೂಕುವಾರು ಮತ್ತು ಭೌತಿಕ ಮತ್ತು ಆರ್ಥಿಕ ಗುರಿಯನ್ನು ನಿಗಧಿಪಡಿಸಿದ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಈ ಜಿಲ್ಲೆಗೆ ರೂ.29.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮತ್ತು ರೂ.29.00 ಲಕ್ಷ ಹಣವನ್ನು ದುರಸ್ತಿಗೆ ಖರ್ಚು ಮಾಡಲಾಗಿದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಎಲ್.ಎ.ಕ್ಯೂ ಸಂಖ್ಯೆ : 2592. ಶ್ರೀ ಯು.ಬಿ. ಬಣಕಾರ, ಶಾಸಕರು, ಹಿರೇಕೆರೂರು.

1996-97ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಶಾಲಾ ದುರಸ್ತಿ ಬಗ್ಗೆ ರಾಜ್ಯ ವಲಯ ಲೆಕ್ಕ ಶೀರ್ಷಿಕೆ ಕೆ:2202-01-800-1-16ರಲ್ಲಿ ಬಿಡುಗಡೆ ಮಾಡಿದ ಹಣದ ಹಾಗೂ ಖರ್ಚು ಮಾಡಿದ ವಿವರಗಳು : (ತಾಲ್ಲೂಕುವಾರು)

ಕ್ರ.ಸಂ.	ತಾಲ್ಲೂಕಿನ ಹೆಸರು	ಬಿಡುಗಡೆಯಾದ ಹಣ	ಖರ್ಚಾದ ಹಣ	ದುರಸ್ಥಿ ಮಾಡಿದ ಕೊಠಡಿಗಳ ಸಂಖ್ಯೆ
1	2	3	4	5
1.	ಧಾರವಾಡ	3.65	3.65	71
2.	ಹುಬ್ಬಳ್ಳಿ (ನಗರ)	1.55	1.55	06
3.	ಕಲಘಟಗಿ	1.70	1.70	34

1	2	3	4	5
4.	ಕುಂದಗೋಳ	1.55	1.55	18
5.	ಶಿಗ್ಗಾವಿ	2.60	2.60	30
6.	ಗದಗ್ (ನಗರ)	1.25	1.25	25
7.	ಮುಂಡರಗಿ	1.60	1.60	32
8.	ನರಗುಂದ	1.45	1.45	29
9.	ನವಲಗುಂದ	1.45	1.45	29
10.	ರೋಣ	1.10	1.10	22
11.	ಶಿರಹಟ್ಟಿ	0.60	0.60	09
12.	ಬ್ಯಾಡಗಿ	1.40	1.40	26
13.	ಹಾನಗಲ್	1.75	1.75	35
14.	ಹಾವೇರಿ	1.75	1.75	35
15.	ಹಿರೇಕೆರೂರು	0.70	0.70	14
16.	ರಾಣೆಬೆನ್ನೂರು	1.75	1.75	19
17.	ಸವಣೂರು	0.25	0.25	05
18.	ಹುಬ್ಬಳ್ಳಿ (ಗ್ರಾಮಾಂತರ)	1.40	1.40	18
19.	ಗದಗ್ (ಗ್ರಾಮಾಂತರ)	1.50	1.50	30
	ಒಟ್ಟು	**29.00**	**29.00**	**477**

ಮಾಗಡಿ ತಾಲ್ಲೂಕು ವೈ.ಜಿ. ಗುಡ್ಡ ಕೆರೆಯ ಅರಣ್ಯ ಪ್ರದೇಶದ ಕಲ್ಲುಗಳ ಅಕ್ರಮ ಸಾಗಾಣಿಕೆ.

1784 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಮಾಗಡಿ ತಾಲ್ಲೂಕು ಮೂಡಬಾಳ ಹೋಬಳಿ ವೈ.ಜಿ.ಗುಡ್ಡೆಕೆರೆಯ ಪ್ರದೇಶದಲ್ಲಿ ಬರುವ ಅರಣ್ಯ ಪ್ರದೇಶದಲ್ಲಿನ ಕಲ್ಲುಗಳನ್ನು ಅನಧಿಕೃತವಾಗಿ ಹಾಗೂ ಅಕ್ರಮವಾಗಿ ಸಾಗುಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*
2. *ಹಾಗಿದ್ದಲ್ಲಿ, ಅಕ್ರಮ ಸಾಗಾಣಿಕೆದಾರರ ಹೆಸರುಗಳನ್ನು ತಿಳಿಸುವುದು, ಇದರ ವಿರುದ್ಧ ಹಾಗೂ ಅಕ್ರಮ ಸಾಗಾಣಿಕೆ ನೆರವಾದ ಅಧಿಕಾರಿಯ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?*